"ಮಧುರ ಮಕ್ಕಳೇ- ಇದು ವಿಚಿತ್ರವಾದ ಸತ್ಸಂಗವಾಗಿದೆ, ಇಲ್ಲಿ ನಿಮಗೆ ಬದುಕಿದ್ದಂತೆಯೇ ಸಾಯುವುದನ್ನು ಕಲಿಸಲಾಗುತ್ತದೆ, ಜೀವಿಸಿದ್ದಂತೆಯೇ ಸಾಯುವವರೇ ಹಂಸಗಳಾಗುತ್ತಾರೆ."

ಪ್ರಶ್ನೆ: ನೀವು ಮಕ್ಕಳಿಗೆ ಈಗ ಯಾವ ಚಿಂತೆಯಿದೆ?

ಉತ್ತರ: ನಾವು ವಿನಾಶಕ್ಕೆ ಮೊದಲೇ ಸಂಪನ್ನರಾಗಬೇಕಾಗಿದೆ. ಯಾವ ಮಕ್ಕಳು ಜ್ಞಾನ ಮತ್ತು ಯೋಗದಲ್ಲಿ ಶಕ್ತಿಶಾಲಿಗಳಾಗುತ್ತಾ ಹೋಗುತ್ತಾರೆಯೋ ಅವರಿಗೆ ಮನುಷ್ಯರನ್ನು ದೇವತೆಗಳನ್ನಾಗಿ ಮಾಡುವ ಹವ್ಯಾಸವಾಗುತ್ತಾ ಹೋಗುತ್ತದೆ. ಅವರು ಸರ್ವಿಸ್ ಇಲ್ಲದೇ ಇರಲು ಸಾಧ್ಯವೇ ಇಲ್ಲ. ಜಿನ್ನ ತರಹ ಓಡುತ್ತಿರುತ್ತಾರೆ. ಸರ್ವೀಸಿನ ಜೊತೆಜೊತೆಗೆ ಸ್ವಯಂನ್ನು ಸಂಪನ್ನ ಮಾಡಿಕೊಳ್ಳುವ ಚಿಂತೆಯಿರುವುದು.

ಓಂ ಶಾಂತಿ. ಆತ್ಮಿಕ ತಂದೆಯು ಕುಳಿತು ಆತ್ಮಿಕ ಮಕ್ಕಳಿಗೆ ತಿಳಿಸುತ್ತಾರೆ- ಆತ್ಮಗಳು ಈಗ ಸಾಕಾರದಲ್ಲಿದ್ದೀರಿ ಮತ್ತು ಪ್ರಜಾಪಿತ ಬ್ರಹ್ಮನ ಸಂತಾನರಾಗಿದ್ದೀರಿ. ಏಕೆಂದರೆ ದತ್ತುಆಗಿದ್ದೀರಿ. ಇವರು ಸಹೋದರ-ಸಹೋದರಿಯನ್ನಾಗಿ ಮಾಡುತ್ತಾರೆಂದು ನಿಮ್ಮ ಬಗ್ಗೆ ಎಲ್ಲರೂ ಹೇಳುತ್ತಾರೆ. ಮಕ್ಕಳಿಗೆ ತಂದೆಯು ತಿಳಿಸಿದ್ದಾರೆ- ಮೂಲತಃ ನೀವಾತ್ಮಗಳು ಸಹೋದರ-ಸಹೋದರಿಯರಾಗಿದ್ದೀರಿ. ಈಗ ಹೊಸಸೃಷ್ಟಿಯ ಸ್ಥಾಪನೆಯಾಗುತ್ತದೆಯಲ್ಲವೆ. ಮೊಟ್ಟಮೊದಲು ಬ್ರಾಹ್ಮಣ ಶಿಖೆಯು ಬೇಕು. ನೀವು ಶೂದ್ರರಾಗಿದ್ದಿರಿ. ಈಗ ಬದಲಾಗಿದ್ದೀರಿ. ಬ್ರಾಹ್ಮಣರಂತೂ ಅವಶ್ಯವಾಗಿ ಬೇಕು, ಪ್ರಜಾಪಿತ ಬ್ರಹ್ಮನ ಹೆಸರಂತೂ ಪ್ರಸಿದ್ಧವಾಗಿದೆ. ಈ ಲೆಕ್ಕದಲ್ಲಿ ನೀವು ತಿಳಿಯುತ್ತೀರಿ- ನಾವೆಲ್ಲಾ ಮಕ್ಕಳು ಸಹೋದರ-ಸಹೋದರರಾದೆವು. ಯಾರೆಲ್ಲಾ ತಮ್ಮನ್ನು ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿಯೆಂದು ಕರೆಸಿಕೊಳ್ಳುವರೋ ಅವರು ಅವಶ್ಯವಾಗಿ ಸಹೋದರ-ಸಹೋದರಿಯಾದರು. ಎಲ್ಲರೂ ಪ್ರಜಾಪಿತ ಬ್ರಹ್ಮನ ಸಂತಾನರೆಂದ ಮೇಲೆ ಅವಶ್ಯವಾಗಿ ಸಹೋದರ-ಸಹೋದರಿಯರಾಗಬೇಕು. ಇದನ್ನು ಯಾರಿಗೆ ತಿಳುವಳಿಕೆಯಿಲ್ಲವೋ ಅವರಿಗೆ ತಿಳಿಸಬೇಕು. ತಿಳುವಳಿಕೆಯಿಲ್ಲದವರೂ ಇದ್ದಾರೆ ಮತ್ತು ಅಂಧಶ್ರದ್ಧೆಯಿರುವವರೂ ಇದ್ದಾರೆ. ಲಕ್ಷ್ಮೀ-ನಾರಾಯಣರ ಪೂಜೆ ಮಾಡುತ್ತಾರೆ. ಆದರೆ ಅವರು ಯಾವಾಗ ಬಂದರು, ಹೇಗೆ ಆದರು ಮತ್ತೆ ಎಲ್ಲಿಗೆ ಹೋದರು? ಎಂಬುದೇನನ್ನೂ ತಿಳಿದುಕೊಂಡಿಲ್ಲ. ಯಾರೆಲ್ಲಾ ಮನುಷ್ಯರು ನೆಹರು ಮೊದಲಾದವರನ್ನು ತಿಳಿದುಕೊಂಡಿದ್ದಾರೆಯೋ ಅವರಿಗೆ ಆ ವ್ಯಕ್ತಿಗಳ ಇತಿಹಾಸ, ಭೂಗೋಳ ಎಲ್ಲವೂ ಗೊತ್ತಿದೆ. ಒಂದುವೇಳೆ ಇವರ ಇತಿಹಾಸವನ್ನೇ ತಿಳಿದುಕೊಂಡಿಲ್ಲವೆಂದರೆ ಅದರಿಂದೇನು ಪ್ರಯೋಜನ? ಪೂಜೆ ಮಾಡುತ್ತಾರೆ. ಆದರೆ ಅವರ ಜೀವನಚರಿತ್ರೆಯನ್ನು ತಿಳಿದುಕೊಂಡಿಲ್ಲ. ಮನುಷ್ಯರ ಜೀವನಚರಿತ್ರೆಯನ್ನಂತೂ ತಿಳಿದುಕೊಂಡಿದ್ದಾರೆ. ಆದರೆ ಯಾರು ಹಿರಿಯರು ಬಂದುಹೋಗಿದ್ದಾರೆಯೋ ಅವರೊಬ್ಬರ ಜೀವನಕಥೆಯೂ ಗೊತ್ತಿಲ್ಲ. ಶಿವನಿಗೆ ಎಷ್ಟೊಂದು ಮಂದಿ ಪೂಜಾರಿಗಳಿದ್ದಾರೆ, ಪೂಜೆ ಮಾಡುತ್ತಾರೆ ಮತ್ತೆ ತಮ್ಮ ಬಾಯಿಂದಲೇ ಈಶ್ವರನು ಕಲ್ಲು-ಮುಳ್ಳಿನಲ್ಲಿದ್ದಾರೆ, ಕಣ-ಕಣದಲ್ಲಿದ್ದಾರೆಂದು ಹೇಳುತ್ತಾರೆ. ಅಂದಮೇಲೆ ಇದು ಜೀವನಕಥೆಯಾಯಿತೇ! ಇದು ಬುದ್ಧಿವಂತಿಕೆಯ ಮಾತಾಗಲಿಲ್ಲ. ತಮ್ಮನ್ನೂ ಸಹ ಪತಿತರೆಂದು ಹೇಳಿಕೊಳ್ಳುತ್ತಾರೆ. ಪತಿತ ಎಂಬ ಶಬ್ಧವು ಎಷ್ಟು ಕೆಟ್ಟದಾಗಿದೆ. ಪತಿತರೆಂದರೆ ವಿಕಾರಿಗಳು, ನೀವಿದನ್ನು ತಿಳಿಸಬಹುದು, ನಾವು ಬ್ರಹ್ಮಾಕುಮಾರ-ಕುಮಾರಿಯರೆಂದು ಏಕೆ ಕರೆಸಿಕೊಳ್ಳುತ್ತೇವೆ? ಏಕೆಂದರೆ ಬ್ರಹ್ಮನ ಸಂತಾನರಾಗಿದ್ದೇವೆ, ದತ್ತು ಮಕ್ಕಳಾಗಿದ್ದೇವೆ. ನಾವು ಗರ್ಭವಂಶಾವಳಿಯಲ್ಲ ಮುಖವಂಶಾವಳಿ ಆಗಿದ್ದೇವೆ. ಬ್ರಾಹ್ಮಣ-ಬ್ರಾಹ್ಮಣಿಯರೆಂದರೆ ಸಹೋದರ-ಸಹೋದರಿಯರಾದಿರಲ್ಲವೆ ಅಂದಮೇಲೆ ಸಹೋದರ-ಸಹೋದರಿಯ ನಡುವೆ ಕುದೃಷ್ಟಿಯಿರಲು ಸಾಧ್ಯವಿಲ್ಲ. ಕೆಟ್ಟವಿಕಾರಗಳೂ ಮುಖ್ಯವಾಗಿ ಕಾಮವಿಕಾರದ್ದಾಗಿದೆ. ನಾವು ಪ್ರಜಾಪಿತ ಬ್ರಹ್ಮನ ಸಂತಾನರು ಸಹೋದರ-ಸಹೋದರಿಯಾಗುತ್ತೇವೆ ಎಂದು ನೀವು ಹೇಳುತ್ತೀರಿ ಮತ್ತು ತಿಳಿದುಕೊಳ್ಳುತ್ತೀರಿ-ನಾವೆಲ್ಲರೂ ಶಿವತಂದೆಯ ಸಂತಾನರು ಪರಸ್ಪರ ಸಹೋದರರಾಗಿದ್ದೇವೆ. ಇದೂ ಸಹ ಪಕ್ಕಾ ಇದೆ. ಪ್ರಪಂಚದವರಿಗೆ ಇದೇನೂ ಗೊತ್ತಿಲ್ಲ. ಹಾಗೆಯೇ ಕೇವಲ ಹೇಳಿಬಿಡುತ್ತಾರಷ್ಟೇ. ನೀವು ಇದನ್ನು ತಿಳಿಸಬಹುದು- ಎಲ್ಲಾ ಆತ್ಮಗಳ ತಂದೆಯು ಅವರೊಬ್ಬರೇ ಆಗಿದ್ದಾರೆ, ಅವರನ್ನೇ ಎಲ್ಲರೂ ಕರೆಯುತ್ತಾರೆ. ನೀವು ಚಿತ್ರಗಳನ್ನು ತೋರಿಸಿದ್ದೀರಿ, ದೊಡ್ಡ-ದೊಡ್ಡ ಧರ್ಮದವರೂ ಸಹ ಈ ನಿರಾಕಾರ ತಂದೆಯನ್ನು ಒಪ್ಪುತ್ತಾರೆ. ಅವರು ನಿರಾಕಾರ ಆತ್ಮಗಳ ತಂದೆಯಾಗಿದ್ದಾರೆ ಮತ್ತೆ ಸಾಕಾರದಲ್ಲಿ ಎಲ್ಲರ ತಂದೆ ಪ್ರಜಾಪಿತ ಬ್ರಹ್ಮನಾಗಿದ್ದಾರೆ, ಬ್ರಾಹ್ಮಣರು ವೃದ್ಧಿ ಹೊಂದುತ್ತಿರುತ್ತಾರೆ, ಭಿನ್ನ-ಭಿನ್ನ ಧರ್ಮಗಳಲ್ಲಿ ಬರುತ್ತಾ ಹೋಗುತ್ತಿರುತ್ತಾರೆ. ಆತ್ಮವಂತೂ ಈ ಶರೀರದಿಂದ ಭಿನ್ನವಾಗಿದೆ, ಶರೀರವನ್ನು ನೋಡಿ ಅವರು ಅಮೇರಿಕನ್ನರು, ಇವರು ಇಂತಹವರೆಂದು ಹೇಳುತ್ತಾರೆ. ಆತ್ಮಕ್ಕಂತೂ ಹೇಳುವುದಿಲ್ಲ. ಆತ್ಮಗಳೆಲ್ಲರೂ ಶಾಂತಿಧಾಮದಲ್ಲಿರುತ್ತಾರೆ, ಅಲ್ಲಿಂದ ಪಾತ್ರವನ್ನಭಿನಯಿಸಲು ಬರುತ್ತಾರೆ. ನೀವು ಯಾವುದೇ ಧರ್ಮದವರಿಗೆ ತಿಳಿಸಿ, ಪುನರ್ಜನ್ಮವನ್ನಂತೂ ಎಲ್ಲರೂ ತೆಗೆದುಕೊಳ್ಳುತ್ತಾರೆ ಮತ್ತು ಮೇಲಿನಿಂದಲೂ ಹೊಸ ಆತ್ಮರು ಬರುತ್ತಿರುತ್ತಾರೆ. ಆದ್ದರಿಂದ ತಂದೆಯು ತಿಳಿಸುತ್ತಾರೆ- ನೀವೂ ಸಹ ಮನುಷ್ಯರಾಗಿದ್ದೀರಿ, ಮನುಷ್ಯರಿಗೆ ಈ ಸೃಷ್ಟಿಚಕ್ರವು ಹೇಗೆ ಸುತ್ತುತ್ತದೆ, ಇದರ ರಚಯಿತ ಯಾರು, ಈ ಚಕ್ರವು ಸುತ್ತುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ ಎಂಬ ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಬಗೆ ತಿಳಿದಿರಬೇಕು. ಇದು ನಿಮಗಷ್ಟೇ ಗೊತ್ತಿದೆ. ದೇವತೆಗಳಿಗೂ ಸಹ ಗೊತ್ತಿಲ್ಲ. ಮನುಷ್ಯರು ಇದನ್ನರಿತುಕೊಂಡು ನಂತರ ದೇವತೆಗಳಾಗುತ್ತಾರೆ.

ಮನುಷ್ಯರನ್ನು ದೇವತೆಗಳನ್ನಾಗಿ ಮಾಡುವವರು ತಂದೆಯಾಗಿದ್ದಾರೆ. ತಂದೆಯು ತನ್ನ ಮತ್ತು ರಚನೆಯ ಪರಿಚಯವನ್ನು ಕೊಡುತ್ತಾರೆ. ನೀವೂ ಸಹ ತಿಳಿದುಕೊಂಡಿದ್ದೀರಿ- ನಾವು ಬೀಜರೂಪ ತಂದೆಯ ಬೀಜರೂಪ ಮಕ್ಕಳಾಗಿದ್ದೇವೆ. ಹೇಗೆ ತಂದೆಯು ಈ ಉಲ್ಟಾ ವೃಕ್ಷದ ಬಗ್ಗೆ ತಿಳಿದುಕೊಂಡಿದ್ದಾರೆಯೋ ಹಾಗೆಯೇ ನಾವೂ ಸಹ ತಿಳಿದಿದ್ದೇವೆ. ಇದನ್ನು ಮನುಷ್ಯರು ಮನುಷ್ಯರಿಗೆಂದೂ ತಿಳಿಸಲು ಸಾಧ್ಯವಿಲ್ಲ. ನಿಮಗೆ ತಂದೆಯೇ ತಿಳಿಸಿದ್ದಾರೆ. ಎಲ್ಲಿಯವರೆಗೆ ನೀವು ಬ್ರಹ್ಮನಿಗೆ ಮಕ್ಕಳಾಗುವುದಿಲ್ಲವೋ ಅಲ್ಲಿಯವರೆಗೆ ಇಲ್ಲಿ ಬರಲು ಸಾಧ್ಯವಿಲ್ಲ. ಎಲ್ಲಿಯತನಕ ಸಾಪ್ತಾಹಿಕ ಶಿಕ್ಷಣವನ್ನು ತೆಗೆದುಕೊಂಡು ಇದನ್ನು ತಿಳಿದುಕೊಳ್ಳುವುದಿಲ್ಲವೋ ಅಲ್ಲಿಯತನಕ ನೀವು ಬ್ರಾಹ್ಮಣರ ಸಭೆಯಲ್ಲಿ ಕುಳಿತುಕೊಳ್ಳಲು ಹೇಗೆ ಸಾಧ್ಯ! ಇದಕ್ಕೆ ಇಂದ್ರಸಭೆಯೆಂದೂ ಹೇಳುತ್ತಾರೆ. ಇಂದ್ರನೆಂದರೆ ಅವರೇನು ಸ್ಥೂಲಮಳೆಯನ್ನು ಸುರಿಸುವುದಿಲ್ಲ. ಇದಕ್ಕೆ ಇಂದ್ರಸಭೆ ಎಂದು ಹೇಳಲಾಗುತ್ತದೆ. ದೇವತೆಗಳೂ ಸಹ ನೀವೇ ಆಗಬೇಕು. ಅನೇಕ ಪ್ರಕಾರದ ದೇವತೆಗಳ ಗಾಯನವಿದೆ. ಯಾರಾದರೂ ಬಹಳ ಸುಂದರವಾಗಿದ್ದರೆ ಅವರು ದೇವತೆಯಂತೆ ಇದ್ದಾರೆಂದು ಹೇಳುತ್ತಾರಲ್ಲವೆ. ಆದರೆ ಇಲ್ಲಂತೂ ಪೌಡರ್ ಇತ್ಯಾದಿಗಳನ್ನು ಹಚ್ಚಿಕೊಂಡು ಸುಂದರವಾಗಿಬಿಡುತ್ತಾರೆ. ಸತ್ಯಯುಗದಲ್ಲಿ ನೀವು ಸ್ವಾಭಾವಿಕವಾಗಿ ಸುಂದರರಾಗುತ್ತೀರಿ, ರಾಜಕುಮಾರ-ಕುಮಾರಿಯರಾಗುತ್ತೀರಿ. ಈಗ ನೀವು ಜ್ಞಾನಸಾಗರದಲ್ಲಿ ಜ್ಞಾನಸ್ನಾನ ಮಾಡುವುದರಿಂದ ದೇವಿ-ದೇವತೆಗಳಾಗಿಬಿಡುತ್ತೀರಿ. ನಾವೀಗ ಹೇಗಿದ್ದವರು ಏನಾಗುತ್ತಿದ್ದೇವೆಂದು ನಿಮಗೆ ತಿಳಿದಿದೆ. ಯಾರು ಸದಾ ಪಾವನ ತಂದೆಯಿದ್ದಾರೆಯೋ, ಅವರು ಸದಾ ಸುಂದರನಾಗಿದ್ದಾರೆ, ಆ ಯಾತ್ರಿಕನೇ ನಿಮ್ಮನ್ನು ಈ ರೀತಿ ಸುಂದರರನ್ನಾಗಿ ಮಾಡಲು ಕಪ್ಪಾದ (ಪತಿತ) ಶರೀರದಲ್ಲಿ ಪ್ರವೇಶ ಮಾಡುತ್ತಾರೆ. ಸುಂದರರನ್ನಾಗಿ ಯಾರು ಮಾಡುವರು? ತಂದೆಯೇ ಮಾಡಬೇಕಾಗುತ್ತದೆಯಲ್ಲವೆ. ಸೃಷ್ಟಿಚಕ್ರವಂತೂ ಸುತ್ತಬೇಕಾಗಿದೆ. ಈಗ ನೀವಂತೂ ಸುಂದರರಾಗಬೇಕಾಗಿದೆ. ಓದಿಸುವವರು ಒಬ್ಬ ಜ್ಞಾನಸಾಗರ ತಂದೆಯೇ ಆಗಿದ್ದಾರೆ. ಅವರು ಜ್ಞಾನಸಾಗರ, ಪ್ರೇಮದ ಸಾಗರನಾಗಿದ್ದಾರೆ. ಆ ತಂದೆಯ ಯಾವ ಮಹಿಮೆ ಗಾಯನವಿದೆಯೋ ಅದು ಲೌಕಿಕ ತಂದೆಗಿರಲು ಸಾಧ್ಯವಿಲ್ಲ. ಇದು ಪಾರಲೌಕಿಕ ತಂದೆಯ ಗಾಯನವೇ ಇದೆ. ತಮ್ಮನ್ನು ಮಹಿಮಾವಂತರನ್ನಾಗಿ ಮಾಡಿ ಎಂದು ಎಲ್ಲರೂ ಕರೆಯುತ್ತಾರೆ. ಈಗ ನೀವು ಈ ರೀತಿ ನಂಬರ್ವಾರ್ ಪುರುಷಾರ್ಥದನುಸಾರ ಆಗುತ್ತಿದ್ದೀರಲ್ಲವೆ. ವಿದ್ಯೆಯಲ್ಲಿ ಎಲ್ಲರೂ ಏಕರಸವಾಗಿರುವುದಿಲ್ಲ, ರಾತ್ರಿ-ಹಗಲಿನ ಅಂತರವಿರುತ್ತದೆ. ನಿಮ್ಮ ಬಳಿಯೂ ಅನೇಕರು ಬರುತ್ತಾರೆ. ಅವಶ್ಯವಾಗಿ ಮೊದಲು ಬ್ರಾಹ್ಮಣರಾಗಬೇಕಾಗಿದೆ ಆಮೇಲೆ ಕೆಲವರು ಚೆನ್ನಾಗಿ ಓದುತ್ತಾರೆ ಇನ್ನೂ ಕೆಲವರು ಕಡಿಮೆ ಓದುತ್ತಾರೆ, ಯಾರು ವಿದ್ಯಾಭ್ಯಾಸದಲ್ಲಿ ಎಲ್ಲರಿಗಿಂತ ಮುಂದಿರುವರೋ ಅವರು ಅನ್ಯರಿಗೂ ಓದಿಸಲು ಸಾಧ್ಯ. ನೀವು ತಿಳಿದುಕೊಳ್ಳಬಹುದು- ಇಷ್ಟೆಲ್ಲಾ ಕಾಲೇಜುಗಳು ತೆರೆಯುತ್ತಾ ಹೋಗುತ್ತವೆ. ತಂದೆಯೂ ಸಹ ತಿಳಿಸುತ್ತಾರೆ- ಮಕ್ಕಳೇ, ಇಂತಹ ಕಾಲೇಜನ್ನು ತೆರೆಯಿರಿ, ಎಲ್ಲಿ ರಚಯಿತ ಮತ್ತು ರಚನೆಯ ಆದಿ-ಮಧ್ಯ-ಅಂತ್ಯದ ಜ್ಞಾನವು ಸಿಗುತ್ತದೆಯೆಂದು ಯಾರೇ ಆಗಲಿ ಬಹುಬೇಗನೆ ಅರಿತುಕೊಳ್ಳುವಂತಿರಬೇಕು. ತಂದೆಯು ಭಾರತದಲ್ಲಿಯೇ ಬರುತ್ತಾರೆ. ಆದ್ದರಿಂದ ಭಾರತದಲ್ಲಿಯೇ ಈ ಈಶ್ವರೀಯ ವಿಶ್ವವಿದ್ಯಾಲಯವು ತೆರೆಯುತ್ತಿರುತ್ತದೆ. ಮುಂದೆ ಹೋದಂತೆ ವಿದೇಶದಲ್ಲಿಯೂ ತೆರೆಯಲ್ಪಡುತ್ತಾ ಹೋಗುತ್ತದೆ. ಬಹಳಷ್ಟು ವಿದ್ಯಾಲಯಗಳು ಬೇಕು, ಎಲ್ಲಿ ಅನೇಕರು ಬಂದು ಹೋಗುತ್ತಾರೆ. ಮತ್ತೆ ಯಾವಾಗ ವಿದ್ಯಾಭ್ಯಾಸವು ಪೂರ್ಣವಾಗುವುದೋ ಆಗ ಎಲ್ಲರೂ ದೇವಿ-ದೇವತಾ ಧರ್ಮಕ್ಕೆ ವರ್ಗಾಯಿತರಾಗುತ್ತಾರೆ. ಅರ್ಥಾತ್ ಮನುಷ್ಯರಿಂದ ದೇವತೆಗಳಾಗುತ್ತಾರೆ. ನೀವು ಮನುಷ್ಯರಿಂದ ದೇವತೆಗಳಾಗುತ್ತೀರಲ್ಲವೆ. ಮನುಷ್ಯರಿಂದ ದೇವತೆಗಳನ್ನಾಗಿ ಮಾಡಿದರೆಂಬ ಗಾಯನವಿದೆ. ಇಲ್ಲಿ ಇದು ಮನುಷ್ಯರ ಪ್ರಪಂಚವಾಗಿದೆ. ಸತ್ಯಯುಗವು ದೇವತೆಗಳ ಪ್ರಪಂಚವಾಗಿದೆ, ದೇವತೆಗಳು ಮತ್ತು ಮನುಷ್ಯರಲ್ಲಿ ರಾತ್ರಿ-ಹಗಲಿನ ಅಂತರವಿದೆ. ದಿನ (ಸತ್ಯ-ತ್ರೇತಾಯುಗ)ದಲ್ಲಿ ದೇವತೆಗಳು, ರಾತ್ರಿ (ದ್ವಾಪರ-ಕಲಿಯುಗ)ಯಲ್ಲಿ ಮನುಷ್ಯರಿರುತ್ತಾರೆ. ಈಗ ಎಲ್ಲರೂ ಭಕ್ತರೇ ಭಕ್ತರಿದ್ದಾರೆ ಪೂಜಾರಿಗಳಾಗಿದ್ದಾರೆ. ಈಗ ನೀವು ಪೂಜಾರಿಗಳಿಂದ ಪೂಜ್ಯರಾಗುತ್ತೀರಿ. ಸತ್ಯಯುಗದಲ್ಲಿ ಶಾಸ್ತ್ರ, ಭಕ್ತಿ ಮೊದಲಾದವುಗಳ ಹೆಸರೇ ಇರುವುದಿಲ್ಲ ಅಲ್ಲಿ ಎಲ್ಲರೂ ದೇವತೆಗಳಿರುತ್ತಾರೆ. ಮನುಷ್ಯರು ಭಕ್ತರಾಗಿದ್ದಾರೆ ಮನುಷ್ಯರೇ ನಂತರ ದೇವತೆಗಳಾಗುತ್ತಾರೆ. ಅದು ದೈವೀಪ್ರಪಂಚವಾಗಿದೆ, ಇದಕ್ಕೆ ಆಸುರೀ ಪ್ರಪಂಚವೆಂದು ಹೇಳುತ್ತಾರೆ. ರಾಮರಾಜ್ಯ ಮತ್ತು ರಾವಣರಾಜ್ಯ. ರಾವಣರಾಜ್ಯವೆಂದು ಯಾವುದಕ್ಕೆ ಹೇಳಲಾಗುತ್ತದೆ. ರಾವಣನು ಯಾವಾಗ ಬಂದನು ಎಂಬುದೇನೂ ನಿಮ್ಮ ಬುದ್ಧಿಯಲ್ಲಿರಲಿಲ್ಲ, ಏನೂ ತಿಳಿದಿರಲಿಲ್ಲ. ಲಂಕೆಯು ಸಮುದ್ರದಲ್ಲಿ ಮುಳುಗಿಹೋಯಿತೆಂದು ಹೇಳುತ್ತಾರೆ. ಅದೇರೀತಿ ದ್ವಾರಕೆಯ ಬಗ್ಗೆಯೂ ಹೇಳುತ್ತಾರೆ. ಈಗ ನಿಮ್ಮ ಬುದ್ಧಿಯಿಲ್ಲಿದೆ- ಈ ಇಡೀ ಲಂಕೆಯು ಮುಳುಗಲಿದೆ ಈ ಇಡೀ ಪ್ರಪಂಚವೇ ಬೇಹದ್ದಿನ ಲಂಕೆಯಾಗಿದೆ. ಇದೆಲ್ಲವೂ ಮುಳುಗಿಹೋಗುತ್ತದೆ. ಇಲ್ಲಿ ನೀರು ಆವರಿಸಿಬಿಡುತ್ತದೆ. ಬಾಕಿ ಸ್ವರ್ಗವೇನೂ ಮುಳುಗುವುದಿಲ್ಲ. ಅಲ್ಲಿ ಎಷ್ಟೊಂದು ಅಪಾರ ಧನವಿತ್ತು, ತಂದೆಯು ತಿಳಿಸಿದ್ದಾರೆ, ಒಂದೇ ಸೋಮನಾಥ ಮಂದಿರವನ್ನು ಮುಸಲ್ಮಾನರು ಎಷ್ಟೊಂದು ಲೂಟಿ ಮಾಡಿದರು, ಈಗ ನೋಡಿ ಏನೂ ಉಳಿದಿಲ್ಲ. ಭಾರತದಲ್ಲಿ ಯಥೇಚ್ಛವಾಗಿ ಹಣವಿತ್ತು. ಭಾರತವನ್ನೇ ಸ್ವರ್ಗವೆಂದು ಹೇಳಲಾಗುತ್ತಿತ್ತು. ಈಗ ಇದನ್ನು ಸ್ವರ್ಗವೆಂದು ಹೇಳಲಾಗುತ್ತದೆಯೇ? ಈಗಂತೂ ನರಕವಾಗಿದೆ ಮತ್ತೆ ಸ್ವರ್ಗವಾಗುವುದು. ಸ್ವರ್ಗವನ್ನು ಯಾರು ಸ್ಥಾಪಿಸುತ್ತಾರೆ. ನರಕವನ್ನಾಗಿ ಯಾರು ಮಾಡುತ್ತಾರೆ? ಇದನ್ನು ನೀವೀಗ ಅರಿತುಕೊಂಡಿದ್ದೀರಿ. ರಾವಣರಾಜ್ಯವು ಎಷ್ಟು ಸಮಯ ನಡೆಯುತ್ತದೆ ಎಂಬುದನ್ನು ತಂದೆಯು ತಿಳಿಸುತ್ತಾರೆ. ರಾವಣರಾಜ್ಯದಲ್ಲಿ ಅನೇಕ ಧರ್ಮಗಳಾಗಿಬಿಡುತ್ತದೆ. ಆದರೆ ರಾಮರಾಜ್ಯದಲ್ಲಿ ಕೇವಲ ಸೂರ್ಯವಂಶಿ, ಚಂದ್ರವಂಶಿಯರೇ ಇರುತ್ತಾರೆ. ಈಗ ನೀವು ಓದುತ್ತಿದ್ದೀರಿ. ಈ ವಿದ್ಯೆಯು ಮತ್ತ್ಯಾರ ಬುದ್ಧಿಯಲ್ಲಿಯೂ ಇಲ್ಲ. ಏಕೆಂದರೆ ಮನುಷ್ಯರಂತೂ ರಾವಣರಾಜ್ಯದಲ್ಲಿದ್ದಾರೆ. ರಾಮರಾಜ್ಯವು ಸತ್ಯಯುಗದಲ್ಲಿರುತ್ತದೆ. ತಂದೆಯು ತಿಳಿಸುತ್ತಾರೆ- ನಾನು ನಿಮ್ಮನ್ನು ಯೋಗ್ಯರನ್ನಾಗಿ ಮಾಡುತ್ತೇನೆ ಮತ್ತೆ ನೀವು

ಅಯೋಗ್ಯರಾಗಿಬಿಡುತ್ತೀರಿ. ಅಯೋಗ್ಯರೆಂದು ಏಕೆ ಹೇಳುತ್ತಾರೆ? ಏಕೆಂದರೆ ಪತಿತರಾಗಿಬಿಡುತ್ತೀರಿ. ದೇವತೆಗಳ ಯೋಗ್ಯತೆಯ ಮಹಿಮೆ ಮತ್ತು ಅಯೋಗ್ಯತೆಯ ಮಹಿಮೆಯನ್ನು ಹಾಡುತ್ತಾರೆ.

ತಂದೆಯು ತಿಳಿಸುತ್ತಾರೆ- ನೀವು ಯಾವಾಗ ಪೂಜ್ಯರಾಗುತ್ತೀರೋ ಆಗ ಹೊಸಪ್ರಪಂಚವಿತ್ತು. ಜನಸಂಖ್ಯೆ ಕಡಿಮೆಯಿತ್ತು, ನೀವೇ ಇಡೀ ವಿಶ್ವದ ಮಾಲೀಕರಾಗಿದ್ದೀರಿ, ಈಗ ನಿಮಗೆ ಬಹಳ ಖುಷಿಯಿರಬೇಕು. ಸಹೋದರ-ಸಹೋದರಿಯರಂತೂ ಆಗುತ್ತೀರಲ್ಲವೆ. ಇವರು ಮನೆ ಬಿಡಿಸುತ್ತಾರೆ ಎಂದು ಮನುಷ್ಯರು ಹೇಳುತ್ತಾರೆ ಮತ್ತೆ ಅವರೇ ಬಂದು ಶಿಕ್ಷಣವನ್ನು ನಿಮಗೆ ಕೊಡುತ್ತಾರೆ. ಇಲ್ಲಿ ಬಂದಾಗ ಜ್ಞಾನವು ಬಹಳ ಚೆನ್ನಾಗಿದೆಯೆಂದು ತಿಳಿದುಕೊಳ್ಳುತ್ತಾರೆ. ಅರ್ಥವನ್ನು ತಿಳಿಯುತ್ತಾರಲ್ಲವೆ. ಸಹೋದರ-ಸಹೋದರಿಯರಾಗಲು ಪವಿತ್ರತೆಯೆಲ್ಲಿಂದ ಬರುವುದು! ಎಲ್ಲವೂ ಪವಿತ್ರತೆಯ ಮೇಲೆ ಆಧಾರಿತವಾಗಿದೆ. ತಂದೆಯು ಬರುವುದೇ ಮಗಧ ದೇಶದಲ್ಲಿ ಅಂದರೆ ಯಾವುದು ಬಹಳ ಅಧೋಗತಿಯನ್ನು ಹೊಂದಿದ ದೇಶವಾಗಿದೆ. ಬಹಳ ಪತಿತರಾಗಿದ್ದಾರೆ. ಆಹಾರ-ಪಾನೀಯಗಳು ಕೊಳಕಾಗಿದೆಯೋ ಅಂತಹ ದೇಶದಲ್ಲಿ ಬರುತ್ತಾರೆ. ತಂದೆಯು ತಿಳಿಸುತ್ತಾರೆ- ನಾನು ಬಹಳ ಜನ್ಮಗಳ ಅಂತಿಮದ ಶರೀರದಲ್ಲಿಯೇ ಪ್ರವೇಶ ಮಾಡುತ್ತೇನೆ. ಇವರೇ 84 ಜನ್ಮಗಳನ್ನು ತೆಗೆದುಕೊಳ್ಳುತ್ತಾರೆ. ಲಾಸ್ಟ್ ಸೋ ಫಾಸ್ಟ್, ಫಾಸ್ಟ್ ಸೋ ಫಸ್ಟ್. ಒಬ್ಬರ ಉದಾಹರಣೆಯನ್ನೇ ತಿಳಿಸುತ್ತಾರಲ್ಲವೆ. ನಿಮ್ಮದು ರಾಜ್ಯಸ್ಥಾಪನೆ ಆಗಲಿದೆ. ನೀವು ಚೆನ್ನಾಗಿ ಅರಿತುಕೊಳ್ಳುತ್ತಾ ಹೋದಂತೆ ನಿಮ್ಮ ಬಳಿ ಅನೇಕರು ಬರುತ್ತಾರೆ. ಈಗ ಇದು ಬಹಳ ಚಿಕ್ಕ ವೃಕ್ಷವಾಗಿದೆ. ಬಹಳಷ್ಟು ಬಿರುಗಾಳಿಗಳು ಬರುತ್ತವೆ. ಸತ್ಯಯುಗದಲ್ಲಿ ಬಿರುಗಾಳಿಯ ಮಾತೇ ಇರುವುದಿಲ್ಲ. ಮೇಲಿಂದ ಹೊಸ-ಹೊಸ ಆತ್ಮಗಳು ಬರುತ್ತಿರುತ್ತಾರೆ. ಇಲ್ಲಿ ಬಿರುಗಾಳಿ ಬರುತ್ತಿದ್ದಂತೆಯೇ ಕೆಳಗೆ ಬೀಳುತ್ತಾರೆ. ಸತ್ಯಯುಗದಲ್ಲಿ ಮಾಯೆಯ ಬಿರುಗಾಳಿಗಳಿರುವುದೇ ಇಲ್ಲ. ಇಲ್ಲಂತೂ ಕುಳಿತು-ಕುಳಿತಿದ್ದಂತೆಯೇ ಶರೀರ ಬಿಡುತ್ತಾರೆ ಮತ್ತು ನಿಮ್ಮದು ಮಾಯೆಯ ಜೊತೆ ಯುದ್ಧ, ಅದೂ ಸಹ ಬಹಳ ತೊಂದರೆ ಕೊಡುತ್ತದೆ. ಸತ್ಯಯುಗದಲ್ಲಿ ಮಾಯೆ ಇರುವುದಿಲ್ಲ. ಅನ್ಯ ಯಾವುದೇ ಧರ್ಮದಲ್ಲಿ ಇಂತಹ ಮಾತಿರುವುದಿಲ್ಲ. ರಾವಣರಾಜ್ಯ ಮತ್ತು ರಾಮರಾಜ್ಯವನ್ನು ಮತ್ಯಾರೂ ಅರಿತುಕೊಂಡಿಲ್ಲ. ಭಲೇ ಸತ್ಸಂಗಕ್ಕೆ ಹೋಗುತ್ತಾರೆ. ಅಲ್ಲಿ ಸಾಯುವ ಹಾಗೂ ಬದುಕುವ ಮಾತಿರುವುದಿಲ್ಲ. ಇಲ್ಲಿ ನೀವು ದತ್ತುಮಕ್ಕಳಾಗಿದ್ದೀರಿ. ನಾವು ಶಿವತಂದೆಯ ಮಕ್ಕಳಾಗಿದ್ದೇವೆ. ಅವರಿಂದ ಆಸ್ತಿಯನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೀರಿ. ತೆಗೆದುಕೊಳ್ಳುತ್ತಾ-ತೆಗೆದುಕೊಳ್ಳುತ್ತಾ ಮತ್ತೆ ಕೆಳಗೆ ಬೀಳುತ್ತೀರೆಂದರೆ ಆಸ್ತಿಯು ಸಮಾಪ್ತಿಯಾಗುತ್ತದೆ. ಹಂಸಗಳಾಗಿದ್ದವರು ಬದಲಾಗಿ ಕೊಕ್ಕರೆಗಳಾಗಿಬಿಡುತ್ತಾರೆ. ಆದರೂ ಸಹ ತಂದೆಯು ದಯಾಹೃದಯಿ ಆಗಿರುವುದರಿಂದ ತಿಳಿಸುತ್ತಲೇ ಇರುತ್ತಾರೆ. ಕೆಲವರು ಮತ್ತೆ ಮೇಲೇರುತ್ತಾರೆ. ಯಾರು ಸ್ಥಿರವಾಗಿ ನಿಲ್ಲುತ್ತಾರೆಯೇ ಅವರಿಗೆ ಮಹಾವೀರ, ಹನುಮಾನ್ ಎಂದು ಹೇಳಲಾಗುತ್ತದೆ. ನೀವು ಮಹಾವೀರ-ಮಹಾವೀರಿಣಿಯರಾಗಿದ್ದೀರಿ. ನಂಬರ್ವಾರಂತೂ ಇದ್ದೇ ಇರುತ್ತಾರೆ. ಎಲ್ಲರಿಗಿಂತ ಶಕ್ತಿಶಾಲಿಯಾಗಿರುವವರನ್ನು ಮಹಾವೀರನೆಂದು ಹೇಳುತ್ತಾರೆ. ಆದಿದೇವನಿಗೂ ಮಹಾವೀರನೆಂದು ಹೇಳುತ್ತಾರೆ. ಇವರಿಂದಲೇ ಈ ಮಹಾವೀರರು ಜನ್ಮ ಪಡೆಯುತ್ತಾರೆ. ಯಾರು ವಿಶ್ವದ ಮೇಲೆ ರಾಜ್ಯ ಮಾಡುತ್ತಾರೆ. ನಂಬರ್ವಾರ್ ಪುರುಷಾರ್ಥದನುಸಾರ ರಾವಣನ ಮೇಲೆ ವಿಜಯ ಪಡೆಯಲು ಪುರುಷಾರ್ಥ ಮಾಡುತ್ತಿರುತ್ತಾರೆ. ರಾವಣತ್ವವೇ ಪಂಚವಿಕಾರ ಗಳಾಗಿದೆ, ಇದಂತೂ ತಿಳುವಳಿಕೆಯ ಮಾತಾಗಿದೆ. ಈಗ ನಿಮ್ಮ ಬುದ್ಧಿಯ ಬೀಗವನ್ನು ತಂದೆಯು ತೆರೆಯುತ್ತಾರೆ. ಮತ್ತೆ ಬುದ್ಧಿಯ ಬೀಗವು ಒಮ್ಮೆಲೆ ಬಂದ್ ಆಗಿಬಿಡುತ್ತದೆ. ಇಲ್ಲಿಯೂ ಸಹ ಇಂತಹವರಿದ್ದಾರೆ, ಯಾರ ಬುದ್ಧಿಯ ಬೀಗವು ತೆರೆಯುತ್ತದೆಯೋ ಅವರು ಹೋಗಿ ಸರ್ವೀಸ್ ಮಾಡುತ್ತಾರೆ. ತಂದೆಯು ತಿಳಿಸುತ್ತಾರೆ- ಮಕ್ಕಳೇ ಹೋಗಿ ಸರ್ವೀಸ್ ಮಾಡಿ, ಯಾರು ಕೆಸರಿನಲ್ಲಿ ಬಿದ್ದಿದ್ದಾರೆಯೋ ಅವರನ್ನು ಹೊರತೆಗೆಯಿರಿ ಹಾಗೆಂದು ಹೇಳಿ ನೀವು ಅದರಲ್ಲಿ ಹೋಗಿ ಬೀಳುವುದಲ್ಲ, ನೀವೂ ಹೊರಬಂದು ಅನ್ಯರನ್ನೂ ಹೊರತೆಗೆಯಿರಿ. ವಿಷಯವೈತರಣೀ ನದಿಯಲ್ಲಿ ಅಪಾರವಾದ ದುಃಖವಿದೆ. ಈಗ ಅಪರಂಪಾರ ಸುಖದಲ್ಲಿ ಹೋಗಬೇಕಾಗಿದೆ. ಯಾರು ಅಪರಂಪಾರ ಸುಖವನ್ನು ಕೊಡುತ್ತಾರೆಯೋ ಅವರ ಮಹಿಮೆಯನ್ನು ಹಾಡಲಾಗುತ್ತದೆ. ತಂದೆಯೂ ಹೇಳುತ್ತಾರೆ- ನೀವು ರಾವಣರಾಜ್ಯದಲ್ಲಿದ್ದಿರಿ. ಈಗ ಅಪಾರ ಸುಖವನ್ನು ಪಡೆಯಲು ನೀವಿಲ್ಲಿ ಬಂದಿದ್ದೀರಿ ನಿಮಗೆ ಅಪಾರ ಸುಖವು ಸಿಗುತ್ತದೆ. ಅಂದಮೇಲೆ ಎಷ್ಟೊಂದು ಖುಷಿಯಿರಬೇಕು ಎಚ್ಚರಿಕೆಯಿಂದಲೂ ಇರಬೇಕು. ಪದವಿಗಳಂತೂ ನಂಬರ್ವಾರ್ ಇರುತ್ತವೆ. ಪ್ರತಿಯೊಬ್ಬ ಪಾತ್ರಧಾರಿಯ ಪದವಿಯೇ ಬೇರೆಯಾಗಿದೆ. ಎಲ್ಲರಲ್ಲಿ ಈಶ್ವರನಿರಲು ಸಾಧ್ಯವಿಲ್ಲ. ತಂದೆಯು ಪ್ರತಿಯೊಂದು ಮಾತನ್ನು ತಿಳಿಸುತ್ತಾರೆ. ನೀವು ತಂದೆಯನ್ನು ಮತ್ತು ರಚನೆಯ ಆದಿ-ಮಧ್ಯ-ಅಂತ್ಯವನ್ನು ನಂಬರ್ವಾರ್ ಪುರುಷಾರ್ಥದನುಸಾರ ಅರಿತುಕೊಳ್ಳುತ್ತೀರಿ. ನಂಬರ್ವಾರ್ ವಿದ್ಯಾಭ್ಯಾಸದನುಸಾರವೇ ಅಂಕಗಳು ಸಿಗುತ್ತವೆ. ಇದು ಬೇಹದ್ದಿನ ವಿದ್ಯೆಯಾಗಿದೆ. ಇದರಲ್ಲಿ ಮಕ್ಕಳಿಗೆ ಬಹಳ ಗಮನವಿರಬೇಕು. ಒಂದುದಿನವೂ ವಿದ್ಯಾಭ್ಯಾಸವನ್ನು ತಪ್ಪಿಸಬಾರದು. ನಾವು ವಿದ್ಯಾರ್ಥಿಗಳಾಗಿದ್ದೇವೆ, ಭಗವಂತನು ಓದಿಸುತ್ತಾರೆ ಎಂಬ ನಶೆಯು ಮಕ್ಕಳಿಗೆ ಏರಿರಬೇಕು. ಭಗವಾನುವಾಚ, ಕೇವಲ ಅವರು ಈ ಹೆಸರನ್ನು ಬದಲಾಯಿಸಿ ಕೃಷ್ಣನ ಹೆಸರನ್ನು ಹಾಕಿಬಿಟ್ಟಿದ್ದಾರೆ. ತಪ್ಪಾಗಿ ಕೃಷ್ಣ ಭಗವಾನುವಾಚ ಎಂದು ತಿಳಿದಿದ್ದಾರೆ. ಕೃಷ್ಣನು ಭಗವಂತನ ನಂತರದವರಾಗಿದ್ದಾರೆ (ನೆಕ್ಸ್ಟ್ ಟು ಗಾಡ್) ತಂದೆಯು ಯಾವ ಸ್ವರ್ಗದ ಸ್ಥಾಪನೆ ಮಾಡುತ್ತಾರೆಯೋ ಅದರಲ್ಲಿ ಮೊದಲನೆಯವರು ಕೃಷ್ಣನಾಗಿದ್ದಾರಲ್ಲವೆ. ಈ ಜ್ಞಾನವು ನಿಮಗೆ ಈಗ ಸಿಕ್ಕಿದೆ. ನಂಬರ್ವಾರ್ ಪುರುಷಾರ್ಥದನುಸಾರ ತಮ್ಮ ಕಲ್ಯಾಣವನ್ನೂ ಮಾಡಿಕೊಳ್ಳುತ್ತಾರೆ ಮತ್ತು ಅನ್ಯರ ಕಲ್ಯಾಣವನ್ನೂ ಮಾಡುತ್ತಿರುತ್ತಾರೆ. ಅವರಿಗೆ ಸರ್ವೀಸ್ ಮಾಡದೇ ಸುಖದ ಅನುಭವವಾಗುವುದಿಲ್ಲ.

ನೀವು ಮಕ್ಕಳು ಜ್ಞಾನ ಮತ್ತು ಯೋಗದಲ್ಲಿ ಶಕ್ತಿಶಾಲಿಗಳಾಗಿಬಿಡುತ್ತೀರೆಂದರೆ ಜಿನ್ನ ತರಹ ಕೆಲಸ ಮಾಡುತ್ತೀರಿ. ಮನುಷ್ಯರನ್ನು ದೇವತೆಗಳನ್ನಾಗಿ ಮಾಡುವ ಹವ್ಯಾಸವಾಗಿಬಿಡುತ್ತದೆ. ಮೃತ್ಯುವಿಗೆ ಮೊದಲೇ ತೇರ್ಗಡೆಯಾಗಬೇಕಾಗಿದೆ. ಬಹಳ ಸರ್ವೀಸ್ ಮಾಡಬೇಕಾಗಿದೆ. ಕೊನೆಯಲ್ಲಂತೂ ಯುದ್ಧಗಳು ನಡೆಯುತ್ತವೆ. ಪ್ರಾಕೃತಿಕ ವಿಕೋಪಗಳೂ ಆಗುತ್ತವೆ. ಒಳ್ಳೆಯದು-

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳ ಪ್ರತಿ ಮಾತಾಪಿತ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಲಾಸ್ಟ್ ಸೋ ಫಸ್ಟ್ ಬರುವುದಕ್ಕಾಗಿ ಮಹಾವೀರರಾಗಿ ಪುರುಷಾರ್ಥ ಮಾಡಬೇಕಾಗಿದೆ. ಮಾಯೆಯ ಬಿರುಗಾಳಿಗಳಿಗೆ ಅಲುಗಾಡಬಾರದು. ತಂದೆಯ ಸಮಾನ ದಯಾಹೃದಯಿಯಾಗಿ ಮನುಷ್ಯರ ಬುದ್ಧಿಯ ಬೀಗವನ್ನು ತೆರೆಯುವ ಸೇವೆ ಮಾಡಬೇಕಾಗಿದೆ.

2. ಜ್ಞಾನಸಾಗರನಲ್ಲಿ ಪ್ರತಿನಿತ್ಯವೂ ಜ್ಞಾನಸ್ನಾನ ಮಾಡಿ ದೇವತೆಗಳಾಗಬೇಕಾಗಿದೆ. ಒಂದುದಿನವೂ ಸಹ ವಿದ್ಯಾಭ್ಯಾಸವನ್ನು ತಪ್ಪಿಸಬಾರದು. ನಾವು ಭಗವಂತನ ವಿದ್ಯಾರ್ಥಿಗಳಾಗಿದ್ದೇವೆಂಬ ನಶೆಯಲ್ಲಿರಬೇಕಾಗಿದೆ.

ವರದಾನ: ಗಂಭೀರತೆಯ ಗುಣದ ಮೂಲಕ ಪೂರ್ತಿ ಅಂಕವನ್ನು ಜಮಾ ಮಾಡಿಕೊಳ್ಳುವಂತಹ ಗಂಭೀರತೆಯ ದೇವಿ ಅಥವಾ ದೇವತಾ ಭವ.

ವರ್ತಮಾನ ಸಮಯ ಗಂಭೀರತೆಯ ಗುಣದ ಅವಶ್ಯಕತೆ ಬಹಳ-ಬಹಳ ಇದೆ, ಏಕೆಂದರೆ ಹೇಳಿಕೊಳ್ಳುವ ಅಭ್ಯಾಸ ಬಹಳವಾಗಿ ಬಿಟ್ಟಿದೆ, ಏನು ಬಾಯಿಗೆ ಬರುವುದೋ ಅದನ್ನು ಹೇಳಿ ಬಿಡುವಿರಿ. ಯಾರಾದರೂ ಏನಾದರೂ ಒಳ್ಳೆಯ ಕೆಲಸ ಮಾಡಿ ನಂತರ ಅದನ್ನು ಹೇಳಿಕೊಂಡು ಬಿಟ್ಟರೆ ಅರ್ಧ ಸಮಾಪ್ತಿಯಾಗಿ ಬಿಡುವುದು. ಅರ್ಧವೇ ಜಮಾ ಆಗುವುದು ಮತ್ತು ಯಾರು ಗಂಭೀರವಾಗಿರುತ್ತಾರೆ ಅವರದು ಪೂರ್ತಿ ಜಮಾ ಅಗುವುದು. ಆದ್ದರಿಂದ ಗಂಭೀರತೆಯ ದೇವಿ ಅಥವಾ ದೇವತಾ ಆಗಿ ಮತ್ತು ತಮ್ಮ ಪೂರ್ತಿ ಮಾರ್ಕ್ಸ್ ಜಮಾ ಮಾಡಿಕೊಳ್ಳಿ. ವರ್ಣನೆ ಮಾಡುವುದರಿಂದ ಮಾರ್ಕ್ಸ್ ಕಡಿಮೆಯಾಗಿ ಬಿಡುವುದು.

ಸ್ಲೋಗನ್: ಬಿಂದು ರೂಪದಲ್ಲಿ ಸ್ಥಿತರಾಗಿದ್ದಾಗ ಸಮಸ್ಯೆಗಳಿಗೆ ಸೆಕೆಂಡ್ನಲ್ಲಿ ಬಿಂದು ಹಾಕಲು ಸಾಧ್ಯವಾಗುವುದು.